

## ಆ್ಯಂಟಿಕ್ ಪೀಸ್ ಗಡಿಯಾರ

ಇತ್ತೀಚೆಗೆ ಮನೆಯ ಶೋಕೇಸ್ ಸ್ವಚ್ಛಗೊಳಿಸುತ್ತಿರುವಾಗ ಎಲ್ಲೋ ಮರೆಯಲ್ಲಿದ್ದ ಹಳೆಯ ಆ್ಯಂಟಿಕ್ ಪೀಸ್ ಎನ್ನಬಹುದಾದ ಗಡಿಯಾರವೊಂದು ಕಣ್ಣಿಗೆ ಬಿತ್ತು. ಈಗೀಗ ಸಮಯ ತಿಳಿಯಲು ಇರುವ ಸುಂದರ ಗೋಡೆ ಗಡಿಯಾರಗಳು, ವಿವಿಧ ಮೊಬೈಲ್‌ಗಳ ನಡುವೆ ಈ ಗಡಿಯಾರದ ಸುಂದರ ವಿನ್ಯಾಸ ಗಮನ ಸೆಳೆಯಿತು. ಫೇವರ್ ಲ್ಯೂಬಾ (Favre Leuba) ಕಂಪನಿ ಹೆಸರಿನ ಈ ಪುಟ್ಟ ಗಡಿಯಾರವು ಬ್ಯಾಟರಿಯೇ ಇಲ್ಲದೆ ಕಾರ್ಯ ನಿರ್ವಹಿಸುತ್ತಿತ್ತು. ಹಿಂಬದಿಯ ಬೇರೆ ಬೇರೆ ಕೀಗಳಿಂದ ಅದು ಸಾಧ್ಯ. ಅಲ್ಲದೆ ಅಲಾರಂ ಸದ್ದಿಗಾಗಿ ನಡುವೆ ಮಗದೊಂದು ಪುಟ್ಟ ಗಡಿಯಾರವಿದ್ದು, ಹಿಂದೆ ಕೀ ಇದೆ. ಅಲಾರಂ ಸದ್ದು ನಿಲ್ಲಿಸಲು ಮೇಲಿನ ಬಿರಡೆ ಒತ್ತಿದರೆ ಸಾಕು ಅದರ ಸದ್ದಡಗುತ್ತದೆ.

ಇದರ ಸೊಗಸು, ಕ್ರಿಯಾಶೀಲತೆ ಈಗಿನವರಿಗೆ ಅಚ್ಚರಿಯೇ ಸರಿ. ಸುಮಾರು ಐದು ದಶಕಗಳಿಂದ ನಮ್ಮಲ್ಲಿ ದುಡಿದು ಮಿಡಿದು ಇದೀಗ ಮರೆಗೆ ಸರಿದ ಟಿಕ್ ಟಿಕ್ ಗೆಳೆಯನಿಗೆ ಇದು ಅಕ್ಷರ ವಿದಾಯವೆಂದರೂ ತಪ್ಪಾಗದು.

**–ಸುಶೀಲಾ ಆರ್. ರಾವ್, ಉಡುಪಿ**






## ಬೆಳವಾಡಿಯ ಸುಂದರ ಕಲಾಕೃತಿ

ಇದು ಚಿಕ್ಕಮಗಳೂರಿನ ಬೆಳವಾಡಿಯ ವೀರನಾರಾಯಣಸ್ವಾಮಿ ದೇಗುಲ. ಇದರ ಶಿಲ್ಪಕಲಾ ಸೌಂದರ್ಯಕ್ಕೆ ಮನಸೋಲದವರಿಲ್ಲ. ಕ್ರಿ.ಶ. 1200ರಲ್ಲಿ ವೀರ ಬಲ್ಲಾಳ ಮತ್ತು ನರಸಿಂಹ ಬಲ್ಲಾಳ ಅರಸರ ಅವಧಿಯಲ್ಲಿ ರಚಿತವಾದ ತ್ರಿಕೂಟಾಚಲ ದೇಗುಲ ಇದಾಗಿದ್ದು, ದೇವಾಲಯದ ಸಮುಚ್ಚಯ ಪ್ರವೇಶಿಸುತ್ತಿದ್ದಂತೆ ದ್ವಾರ ಮಂಟಪದ ಎರಡು ಬದಿಗಳ ಸಾಲಂಕೃತ ಕೆತ್ತನೆಗಳು ಮತ್ತು ಆಕರ್ಷಕ ಭಂಗಿಯ ಆನೆಗಳು ನಮ್ಮನ್ನು ಸ್ವಾಗತಿಸುತ್ತವೆ.

ನವರಂಗದೊಳಗಿನ ವಿಭಿನ್ನ ಚಿತ್ತಾರಗಳನ್ನೊಳಗೊಂಡ ಹಾಗೂ ನುಣುಪಾದ ನಲುವತ್ತೈದಕ್ಕೂ ಹೆಚ್ಚು ಕಂಬಗಳು ನಮ್ಮನ್ನು ಮೂಕವಿಸ್ಮಿತರನ್ನಾಗಿಸಿದವು. ಗರ್ಭಗುಡಿಯೊಳಗೆ ಸಾಲಿಗ್ರಾಮ ಕರಿಶಿಲೆಯಲ್ಲಿ ಕೆತ್ತಲ್ಪಟ್ಟ ಎಂಟು ಅಡಿ ಎತ್ತರದ ವೀರನಾರಾಯಣ ಸ್ವಾಮಿ ಮೂರ್ತಿ ಕಂಗೊಳಿಸುತ್ತದೆ. ಎಡ ಬದಿಯ ಗುಡಿಯಲ್ಲಿ ಉತ್ತರಕ್ಕೆ ಮುಖಮಾಡಿರುವ ವೇಣುಗೋಪಾಲಸ್ವಾಮಿ, ದಕ್ಷಿಣಕ್ಕೆ ಮುಖಮಾಡಿರುವ ಯೋಗಾನರಸಿಂಹಸ್ವಾಮಿಯ ಶಾಂತ ಮುಖಭಾವದ ಯೋಗ ಭಂಗಿಯಲ್ಲಿರುವ ಮೂರ್ತಿಯು ಗಮನ ಸೆಳೆಯುತ್ತದೆ. ಈ ಮೂರೂ ಮೂರ್ತಿಗಳು ಅಪ್ರತಿಮ ಕಲಾಕೃತಿಗಳು ಎಂದು ಪುರಾತತ್ವ ಇಲಾಖೆ ಹೇಳಿದೆ.

ಪ್ರತಿ ಮಾರ್ಚ್ 23ರಂದು ಸೂರ್ಯೋದಯದ ಕಿರಣಗಳು ನೇರವಾಗಿ ಇಲ್ಲಿನ ಏಳು ದ್ವಾರಗಳನ್ನು ದಾಟಿ ವೀರನಾರಾಯಣಸ್ವಾಮಿಯ ಮೇಲೆ ಬೀಳುವ ವಿಸ್ಮಯ ನಡೆಯುತ್ತದೆ. ಅದನ್ನು ಕಣ್ತುಂಬಿಕೊಳ್ಳಲು ಭಕ್ತರು ಇಲ್ಲಿ ಸೇರುತ್ತಾರೆ. ಈ ದೇಗುಲದ ಉಸ್ತುವಾರಿಯನ್ನು ಶೃಂಗೇರಿಯ ಶಾರದಾ ಪೀಠವು ನಿರ್ವಹಿಸುತ್ತಿದೆ. ಐತಿಹ್ಯದಂತೆ ಭೀಮನು ಬಕಾಸುರನನ್ನು ಕೊಂದ ಸ್ಥಳ (ಏಕಚಕ್ರ ನಗರ) ಇದಾಗಿದ್ದು, ಈ ಕಾರಣಕ್ಕೆ ಗ್ರಾಮದಲ್ಲಿ ಬಂಡಿ ಹಬ್ಬವನ್ನೂ ಮಾಡಲಾಗುತ್ತದೆ. ಚಿಕ್ಕಮಗಳೂರಿನಿಂದ ಇಪ್ಪತ್ತೊಂಬತ್ತು ಕಿ.ಮೀ. ಮತ್ತು ಹಳೇಬೀಡಿನಿಂದ ಹನ್ನೆರಡು ಕಿ.ಮೀ. ದೂರದಲ್ಲಿದೆ ಈ ಬೆಳವಾಡಿ ದೇವಾಲಯ.

**–ಕೆ. ದಿನಮಣಿ ಶಾಸ್ತ್ರೀ, ಬ್ರಹ್ಮಾವರ**



